ಅ) ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ರಾಜೀವ್‌ಗಾಂಧಿ ಪ್ರತಿಷ್ಠಾನದ ಸಹಯೋಗದಿಂದ ಯಾವ ಯಾವ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ ?

ಆ) ದಕ್ಷಿಣಕನ್ನಡ ಜಿಲ್ಲೆಯ ಯಾವ ಪ್ರದೇಶಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ ?

ಇ) ಇದಕ್ಕಾಗಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟೆಷ್ಟು ?

ಈ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಡಿ ಯಾವ ಯಾವ ಪ್ರದೇಶಗಳಲ್ಲಿ ಗ್ರಾಮೀಣ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು)

ಅ) ಈವರೆಗೆ ರಾಜ್ಯದಲ್ಲಿ 'ಸಬ್-ಮಿಷನ್' ಕಾರ್ಯಕ್ರಮದಡಿ ಯಾವುದೇ ಕುಡಿಯುವ ನೀರಿನ ಯೋಜನೆಯು ಪೂರ್ಣಗೊಂಡಿರುವುದಿಲ್ಲ.

ಆ) ಈವರೆಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸದರಿ ಕಾರ್ಯಕ್ರಮದಡಿ ಯಾವುದೇ ಯೋಜನೆಯನ್ನು ಕೈಗೆತ್ತಿಕೊಂಡಿರುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಈ) ಪ್ರಸಕ್ತ ಸಾಲಿನಲ್ಲಿ ಸದರಿ ಕಾರ್ಯಕ್ರಮದಡಿ ಈವರೆಗೆ ಯಾವುದೇ ಯೋಜನೆಯನ್ನು ಕೈಗೆತ್ತಿಕೊಂಡಿರುವುದಿಲ್ಲ.

ಸಬ್-ಮಿಷನ್ ಕಾರ್ಯಕ್ರಮದಡಿ, ಪ್ರಾರಂಭದಿಂದ ಮಾರ್ಚ್-99ರ ಅಂತ್ಯದವರೆಗೆ ರಾಜ್ಯದ 9 ಜಿಲ್ಲೆಗಳಲ್ಲಿ (ದಾವಣಗೆರೆ ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಬಿಜಾಪುರ, ಉತ್ತರ ಕನ್ನಡ, ಬಳ್ಳಾರಿ ಮತ್ತು ಕೊಪ್ಪಳ) ಒಟ್ಟು ರೂ. 51.69 ಕೋಟಿ ಅಂದಾಜುಮೊತ್ತದಲ್ಲಿ 19 ಯೋಜನೆಗಳು ಅನುಮೋದನೆ ಗೊಂಡಿದ್ದು, ಸದರಿ ಯೋಜನೆಗಳಡಿ ಕುಡಿಯುವ ನೀರಿನಲ್ಲಿ ಅಧಿಕ ಫ್ಲೋರೈಡ್ : ಅಧಿಕ ಲವಣಾಂಶ ಸಮಸ್ಯೆಯಿರುವ 141 ಗ್ರಾಮ : ಜನವಸತಿಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಯಾಗಲಿದೆ.

ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣಕ್ಕೆ ಖರ್ಚು ಮಾಡಿದ ಹಣ

1050(1515)

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1) ರಾಜ್ಯ ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಮಾಡಿದ ಹಣ ಎಷ್ಟೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

2) ಇದರಲ್ಲಿ ಕೇಂದ್ರ ಸರ್ಕಾರದಿಂದ ಮತ್ತು ಇತರ ಮೂಲಗಳಿಂದ ಸಂಗ್ರಹವಾದ ಹಣ ಎಷ್ಟೆಷ್ಟು

3) ಸರ್ಕಾರ ಆಯವ್ಯಯದಲ್ಲಿ ಈ ಉದ್ದೇಶಕ್ಕಾಗಿ ಒದಗಿಸಿದ ಹಣ ಎಷ್ಟು ಮತ್ತು ಖರ್ಚು ಮಾಡಲಾದ ಹಣ ಎಷ್ಟು ?

ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

1) ರಾಜ್ಯ ಸರ್ಕಾರವು ಕಳೆದ 2 ವರ್ಷಗಳಲಿ : ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಈ ಕೆಳಕಂಡಂತೆ ಹಣ ಖರ್ಚು ಮಾಡಿದೆ.

ವರ್ಷ	ಪ್ರಾಥಮಿಕ ಶಿಕ್ಷಣ (ಲಕ್ಷಗಳಲ್ಲಿ)	ಪ್ರೌಢ ಶಿಕ್ಷಣ (ಲಕ್ಷಗಳಲ್ಲಿ)	ಒಟ್ಟು (ಲಕ್ಷಗಳಲ್ಲಿ)
1997-98	110415.95	49346.80	159762.75
1998-99	134463.40	59326.73	193790.13

(ಜಿಲ್ಲಾವಾರು ಖರ್ಚಿನ ವಿವರಗಳನ್ನು ಅನುಬಂಧ-1 ಮತ್ತು ಅನುಬಂಧ-2ರಲ್ಲಿ ಲಗತ್ತಿಸಿದೆ)

2)

ವರ್ಷ	ಪ್ರಾಥಮಿಕ ಶಿಕ್ಷಣ (ಲಕ್ಷಗಳಲ್ಲಿ)	ಪ್ರೌಢ ಶಿಕ್ಷಣ (ಲಕ್ಷಗಳಲ್ಲಿ)	ಒಟ್ಟು
1997-98	3086.28	925.68	ಕೇಂದ್ರ ಸರ್ಕಾರದಿಂದ
1998-99	3437.16	-	-

3) ಸರ್ಕಾರ ಒದಗಿಸಿರುವ ಹಣ :

ವರ್ಷ	ಪ್ರಾಥಮಿಕ ಶಿಕ್ಷಣ (ಲಕ್ಷಗಳಲ್ಲಿ)	ಪ್ರೌಢ ಶಿಕ್ಷಣ (ಲಕ್ಷಗಳಲ್ಲಿ)	ಒಟ್ಟು (ಲಕ್ಷಗಳಲ್ಲಿ)
1997-98	112738.49	19365.18	162103.677
1998-89	135353.30	64227.60	199580.90

ಸರ್ಕಾರ ಖರ್ಚು ಮಾಡಿರುವ ಹಣ :-

ವರ್ಷ	ಪ್ರಾಥಮಿಕ ಶಿಕ್ಷಣ (ಲಕ್ಷಗಳಲ್ಲಿ)	ಪ್ರೌಢ ಶಿಕ್ಷಣ (ಲಕ್ಷಗಳಲ್ಲಿ)	ಒಟ್ಟು (ಲಕ್ಷಗಳಲ್ಲಿ)
1997-98	110415.95	49346.80	159762.75
1998-99	134463.40	59326.73	193790.13

ಅನುಬಂಧ - 1

1997-98 ಮತ್ತು 1998-99ನೇ ಸಾಲುಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕಾಗಿ ಜಿಲ್ಲಾವಾರು ಮಾಡಿರುವ ಖರ್ಚಿನ ತಃಖ್ತೆ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಪ್ರಾಥಮಿಕ ಶಿಕ್ಷಣ	ಪ್ರೌಢ ಶಿಕ್ಷಣ	ಒಟ್ಟು
		1997-98		
1)	ಬೆಂಗಳೂರು ನಗರ	8779.75	4854.88	13634.61
2)	ಬೆಂಗಳೂರು ಗ್ರಾಮಾಂತರ	4357.04	1563.99	5921.03
3)	ಚಿತ್ರದುರ್ಗ	5788.00	3107.03	9495.03
4)	ಕೋಲಾರ	5793.29	2041.81	7835.10
5)	ಶಿವಮೊಗ್ಗ	5099.95	2259.84	7359.79
6)	ತುಮಕೂರು	6532.90	3280.33	9813.23
7)	ಮೈಸೂರು	6817.70	2771.95	9589.65
8)	ಚಿಕ್ಕಮಗಳೂರು	3288.20	1573.62	4861.82
9)	ದಕ್ಷಿಣ ಕನ್ನಡ	7428.12	3443.00	10871.12
10)	ಹಾಸನ	4718.19	2130.50	6848.69
11)	ಕೊಡಗು	1821.61	872.62	2694.23
12)	ಮಂಡ್ಯ	4264.65	1809.48	6074.13
13)	ಬೆಳಗಾಂ	7873.62	4014.80	11888.42
14)	ಬಿಜಾಪುರ	7138.60	2848.40	9887.00
15)	ಧಾರವಾಡ	7838.92	3968.01	11806.93
16)	ಉತ್ತರ ಕನ್ನಡ	4740.19	1882.13	6622.32
17)	ಗುಲ್ಬರ್ಗ	5525.36	2256.64	7784.00
18)	ಬಳ್ಳಾರಿ	4594.38	1345.29	6139.67
19)	ಬೀದರ್	3600.88	1529.09	5129.97
20)	ರಾಯಚೂರು	4412.64	1593.07	6015.71
21)	ದಾವಣಗೆರೆ			
22)	ಚಾಮರಾಜನಗರ,			
23)	ಉಡುಪಿ			
24)	ಬಾಗಲಕೋಟೆ			
25)	ಗದಗ			
26)	ಹಾವೇರಿ			
27)	ಕೊಪ್ಪಳ			
	ಒಟ್ಟು	110415.95	49346.80	159762.75